# ಅಪಾರ ಶಕ್ತಿಯ ಮೂಲಮಂತ್ರ

ಸ್ವಾಮಿ ಅಘಹರಾನಂದ

ಬೆಳವಣಿಗೆಯ ಹಂತದಲ್ಲಿರುವ ಯುವಪೀಳಿಗೆಯು ಕೆಲವು ಮಾರ್ಗದರ್ಶಕ ಸೂತ್ರಗಳನ್ನು ಅನುಸರಿಸಿದಲ್ಲಿ, ಅವರ ಭವಿಷ್ಯ ಜೀವನವು ಉಜ್ಜ್ವಲ ಗೊಳ್ಳುವುದು. ಈ ಕುರಿತಂತೆ ಹತ್ತುಹಲವು ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ. ಲೇಖಕರು ಉತ್ತಮ ಭಾಷಣಕಾರರು ಹಾಗೂ ಲೇಖಕರು; ಪ್ರಸ್ತುತ ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ಪೀಠಿಕೆ

ಕರ್ಮ ಸಿದ್ಧಾಂತ ಎಂಬುದು ಹಿಂದೂಧರ್ಮದ ಪ್ರಮುಖ ನಂಬಿಕೆಗಳಲ್ಲಿ ಒಂದು. ಇದನ್ನು ಕನ್ನಡದಲ್ಲಿ 'ಬಿತ್ತಿದಂತೆ ಬೆಳೆ' ಎನ್ನಬಹುದು. ನಾವು ಮಾಡುವ ಒಳ್ಳೆಯ – ಕೆಟ್ಟ ಆಲೋಚನೆಗಳು, ಚಿಂತನೆಗಳು, ಕ್ರಿಯೆಗಳು – ಇವಾವುದೂ ವ್ಯರ್ಥವಾಗುವುದಿಲ್ಲ. ಅದು ಸಮಾಜದ ಮೇಲೆ ಸಮಷ್ಟಿ ರೂಪದಲ್ಲಿ ಹಾಗೂ ನಮ್ಮ ಮೇಲೆ ವ್ಯಷ್ಟಿ ರೂಪದಲ್ಲಿ ಪರಿಣಾಮ ಬೀರುತ್ತಲೇ ಇರುತ್ತದೆ. ಇಂದಲ್ಲ ನಾಳೆ ನಾವದರ ಪರಿಣಾಮವನ್ನು ಎದುರಿಸಲೇಬೇಕಾಗುತ್ತದೆ.

## ಕರ್ತವ್ಯಪಥವೆಂಬ ರಾಜಮಾರ್ಗ

ಸ್ವಾಮಿ ವಿವೇಕಾನಂದರು ತಮ್ಮ 'ಕರ್ಮಯೋಗ'ವೆಂಬ ಉಪನ್ಯಾಸದಲ್ಲಿ ಒಂದು ಅದ್ಭುತವಾದ ಮಾತನ್ನು ಹೇಳುತ್ತಾರೆ. ಅವರೆನ್ನುತ್ತಾರೆ, 'Even a fool may rule the whole world if he works and waits. Let him wait a few years, restrain that foolish idea of governing; and when that idea is wholly gone, he will be a power in the world.' ಎಂದರೆ, ಒಬ್ಬ ಮೂರ್ಖ ಕೂಡ ಜಗತ್ತನ್ನು ನಿಯಂತ್ರಿಸಬಲ್ಲ. ಆದರೆ ಆತ ಅದಕ್ಕಾಗಿ ಪ್ರಯತ್ನ ಪಡಬೇಕು ಹಾಗೂ ಕೆಲಕಾಲ ಕಾಯಬೇಕು. 'ಜಗತ್ತನ್ನು ನಾನು ನಿಯಂತ್ರಿಸಬೇಕು' ಎಂಬ ಮೂರ್ಖ ಭಾವನೆಯನ್ನು ಕಿತ್ತೊಗೆಯಬೇಕು. ಆಗ ಆತ ಒಂದು ಶಕ್ತಿಯಾಗಿ ಹೊರಹೊಮ್ಮುತ್ತಾನೆ, ಎಂದು.

ಈ ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಅನಂತ ಶಕ್ತಿ ಅಡಗಿದೆ. ಮನುಷ್ಯ ಪ್ರಯತ್ನ ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು. ಯಾವುದಾದರೂ ಆತನಿಂದ ಸಾಧ್ಯವಾಗಿಲ್ಲ ಎಂದರೆ ಅದಕ್ಕೆ ಬೇಕಾದ ಪೂರಕ ಪ್ರಯತ್ನವನ್ನು ಆತ ಮಾಡಿಲ್ಲ ಎಂದೇ ಅರ್ಥ. ಹೀಗಾಗಿ ಸ್ವಾಮೀಜಿ ಹೇಳುತ್ತಿದ್ದಾರೆ, ಒಬ್ಬ ಮೂರ್ಖ ಕೂಡ ಜಗತ್ತನ್ನು ನಿಯಂತ್ರಿಸಬಲ್ಲ ಎಂದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪಾಲಿಗೆ ಬಂದ ಕರ್ತವ್ಯವನ್ನು ನಿಷ್ಠೆಯಿಂದ, ದಕ್ಷತೆಯಿಂದ ಮಾಡುತ್ತಾ ಹೋದರೆ, ಅದು ಆತನಲ್ಲಿನ



ಸಾಮರ್ಥ್ಯವನ್ನು ಹೊರತರುತ್ತದೆ. ಕಾಲಕ್ರಮದಲ್ಲಿ ಆತ ಇನ್ನೂ ಹೆಚ್ಚಿನ ಸವಾಲುಗಳುಳ್ಳ ಕಾರ್ಯವನ್ನು ಕೈಗೊಳ್ಳಬಹುದು.

ವಿದ್ಯಾರ್ಥಿಯು ಈಗ ತನ್ನೆದುರಿಗಿನ ಕರ್ತವ್ಯಗಳಾದ ಜ್ಞಾನ ಸಂಪಾದನೆ, ಮಾತಾಪಿತರ ಸೇವೆ, ಗುರುಹಿರಿಯರ ಆಜ್ಞಾಪಾಲನೆ ಹಾಗೂ ಪ್ರತಿಭಾವಿಕಾಸಕ್ಕೆ ಗಮನ ಹರಿಸಿದರೆ, ಮುಂದೆ ಆತ ಸಮಾಜಸೇವೆ ಹಾಗೂ ರಾಷ್ಟ್ರಸೇವೆಯನ್ನು ಅತ್ಯುತ್ಕೃಷ್ಟ ರೀತಿಯಲ್ಲಿ ಮಾಡುವ ಅವಕಾಶ ದೊರಕುತ್ತದೆ. ಪ್ರಸ್ತುತ ಕರ್ತವ್ಯಗಳನ್ನು ಆತ ನಿರ್ಲಕ್ಷಿಸಿ, ಸುಖಲೋಲುಪತೆಯಲ್ಲಿ ವ್ಯರ್ಥವಾಗಿ ಕಾಲ ಕಳೆದರೆ ಮುಂದೆ ಉನ್ನತ ಮಟ್ಟದ ಅವಕಾಶ ದೊರೆತಾಗ ಆತ ಅದರಲ್ಲಿ ವಿಫಲನಾಗುವುದೇ ಖಂಡಿತ. ಈ ಜಗತ್ತಿನಲ್ಲಿ ಯಾವ ಶ್ರೇಷ್ಠ ವ್ಯಕ್ತಿಯೂ ಒಂದೇ ದಿನದಲ್ಲಿ ನಿರ್ಮಾಣಗೊಂಡಿಲ್ಲ. ಅವರೆಲ್ಲ ತಮ್ಮ ಪಾಲಿಗೆ ಬಂದ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಿಯೇ ಉನ್ನತ ಹಂತಕ್ಕೆ ತಲುಪಿದ್ದು. ಇದನ್ನು ನಮ್ಮ ಯುವಜನತೆ ಮನಗಾಣುವುದು ಮುಖ್ಯ.

## ಶಕ್ತಿ ನಿರ್ಮಾಣದ ರಹಸ್ಯ

ನಾವು ಯಾವ ಸ್ತರದ ಶಕ್ತಿಯನ್ನು ನಿಯಂತ್ರಿಸುತ್ತೇವೆಯೋ ಅಂತಹ ಮಟ್ಟದ ಶಕ್ತಿ ವ್ಯಕ್ತವಾಗುತ್ತದೆ. ಇದು ಪ್ರಕೃತಿಯ ನಿಯಮ. ಆಲಸ್ಯ, ಕೆಲಸವನ್ನು ಮುಂದೂಡುವುದು ಇವೆಲ್ಲ ಮನಸ್ಸಿನ ಚಂಚಲತೆ. ಇದೂ ಕೂಡ ಮನಸ್ಸಿನ ಶಕ್ತಿಯೇ. ಈ ಶಕ್ತಿಯನ್ನು ಯಾರು ನಿಯಂತ್ರಿಸುತ್ತಾನೆಯೋ ಆತನೇ ಯಶಸ್ಸನ್ನು ಗಳಿಸುತ್ತಾನೆ. ನಿದ್ರೆಯೂ ಕೂಡ ಒಂದು ಶಕ್ತಿಯೇ. ಆದ್ದರಿಂದ ನಮ್ಮ ಗುರುಹಿರಿಯರು ಮುಂಜಾನೆ ಬೇಗ ಏಳಬೇಕು ಎಂಬ ನಿಯಮ ಮಾಡಿದ್ದಾರೆ. ಒಂದು ವಾರ ಯಾರು ನಿದ್ರೆ ಎಂಬ ಶಕ್ತಿಯನ್ನು ನಿಯಂತ್ರಿಸಿ ನಿಯತ ಕಾಲಕ್ಕೆ ಏಳುತ್ತಾರೆಯೋ, ಅವರ ಮುಖದಲ್ಲಿ ಒಂದು ಬಗೆಯ ಉಲ್ಲಾಸ ಹಾಗೂ ವರ್ಚಸ್ಸನ್ನು ನಾವು ಕಾಣಬಲ್ಲೆವು. ಇದೇ ಮಾತು ಕಾಮ, ಕ್ರೋಧ, ಅಸೂಯೆ ಇತ್ಯಾದಿ ಭಾವನೆಗಳಿಗೂ ಅನ್ವಯಿಸಬಹುದು. ಇವನ್ನು ನಿಯಂತ್ರಣ ಮಾಡಿದಾತ ಜಗತ್ತಿನಲ್ಲಿ ಅಭೂತಪೂರ್ವ ಶಕ್ತಿಯಾಗಿ ಹೊರಹೊಮ್ಮುವುದನ್ನು ನಾವು ಕಾಣಬಹುದು. ಕ್ರಿಸ್ತ, ಬುದ್ಧ, ಮಹಾವೀರ, ರಾಮಕೃಷ್ಣ ಪರಮಹಂಸ – ಇವರನ್ನೆಲ್ಲ ಜಗತ್ತು ಇಂದು ಅವತಾರ ಪುರುಷರೆಂದು ಪೂಜಿಸುತ್ತಿರುವುದು ಇದೇ ಕಾರಣಕ್ಕಾಗಿ.

ಈ ಕಾರಣಕ್ಕಾಗಿ, ಜಗತ್ತನ್ನು ನಾನು ನಿಯಂತ್ರಿಸಬೇಕು ಎಂಬ ಮೂರ್ಖ ಭಾವನೆಯನ್ನು ಕಿತ್ತೊಗೆಯಬೇಕು; ಆಗ ಆತ ಒಂದು ಶಕ್ತಿಯಾಗಿ ಹೊರಹೊಮ್ಮುತ್ತಾನೆ ಎನ್ನುತ್ತಾರೆ ಸ್ವಾಮೀಜಿ.

## ನಿಯಂತ್ರಿಸುವ ಮಹಾಶಕ್ತಿ

ಎಲ್ಲರನ್ನೂ ನಿಯಂತ್ರಣ ಮಾಡಬೇಕು ಎಂಬ ಬಯಕೆಯನ್ನು ಬಿಟ್ಟರೆ ಆಗ ಮಾತ್ರ ನಾವು ಬೇರೆಯವರನ್ನು ನಿಯಂತ್ರಣ ಮಾಡಬಹುದು. ನಿಯಂತ್ರಣ ಮಾಡುವ ಆಸೆ ಬಿಟ್ಟರೆ ಆಗ ನಿಯಂತ್ರಣ ಮಾಡಬಹುದು.

ಇಲ್ಲೊಂದು ಅದ್ಭುತವಾದ ಮನೋವೈಜ್ಞಾನಿಕ ಅಂಶ ಅಡಗಿದೆ. ಇತರರು ನಮ್ಮನ್ನು ಗೌರವಿಸಲಿ, ಗುರುತಿಸಲಿ ಎಂಬ ಬಯಕೆ, ನಾವು ಸದಾ ಕಾಲ ಇತರರ ಕುರಿತಾಗಿಯೇ ಯೋಚಿಸುವಂತೆ ಮಾಡುತ್ತದೆ. ಅವರು ನಮ್ಮ ಕುರಿತಾಗಿ ಏನೆಂದು ಚಿಂತಿಸುತ್ತಿದ್ದಾರೆ ಎಂಬ ಆಲೋಚನೆಯೇ ನಮ್ಮಲ್ಲಿ ತುಂಬಿರುತ್ತದೆ. ಅವರ ಸಣ್ಣ ಮುಗುಳ್ನಗೆ, ಪ್ರಶಂಸೆ, ಹೊಗಳಿಕೆ ನಮ್ಮನ್ನು ಹಿಗ್ಗುವಂತೆ ಮಾಡುತ್ತದೆ, ಹಾಗೆಯೇ ಇತರರ ಸಣ್ಣ ತಿರಸ್ಕಾರ, ಅಸಡ್ಡೆ, ನಿಂದನೆ, ಟೀಕೆ ನಮ್ಮನ್ನು ಕುಗ್ಗುವಂತೆ ಮಾಡುತ್ತದೆ. ಹೀಗೆ ನಮಗರಿವಿಲ್ಲದೆಯೇ ನಾವು ನಮ್ಮ ಮನಸ್ಸಿನ ನಿಯಂತ್ರಣವನ್ನು ಇತರರಿಗೆ ನೀಡುತ್ತೇವೆ. ಇದರಿಂದಾಗಿ ನಾವು ಇನ್ನೂ ಹೆಚ್ಚು ದುರ್ಬಲರಾಗುತ್ತ ಹೋಗುತ್ತೇವೆ.

ಶ್ರೇಷ್ಠ ವ್ಯಕ್ತಿಗಳ ಗಮನ ಅವರೆಡೆಗೇ ಇರುತ್ತದೆ. ಅವರುಗಳು ತಮ್ಮ ಆಲೋಚನೆ, ಚಿಂತನೆ, ಭಾವನೆ ಹಾಗೂ ಕ್ರಿಯೆಯ ಕಡೆಗೇ ಗಮನ ಹರಿಸುತ್ತಾರೆ. ಅಲ್ಲಿ ಪ್ರಾಮಾಣಿಕತೆ, ನಿಸ್ವಾರ್ಥತೆ ಹಾಗೂ ದಕ್ಷತೆಯನ್ನು ತರುವ ಪ್ರಯತ್ನ ಮಾಡುತ್ತಾ ಇರುತ್ತಾರೆ. ಹೀಗಾಗಿ ಅವರಲ್ಲಿ ಆತ್ಮವಿಶ್ವಾಸ ಇರುತ್ತದೆ. ಈ ವಿಶ್ವಾಸವೇ ಇತರರು ಅವರೆಡೆಗೆ ಆಕರ್ಷಿತರಾಗುವಂತೆ ಅಥವಾ ಅವರಿಂದ ಪ್ರಭಾವಿತರಾಗುವಂತೆ ಮಾಡುತ್ತದೆ.

ಇತರರು ನಮ್ಮನ್ನು ಇಷ್ಟಪಡಲಿ ಅಥವಾ ದ್ವೇಷಿಸಲಿ, ನಾವು ಮಾತ್ರ ಸದಾ ಮನಸ್ಸಿನಿಂದ ಇತರರ ಹಿತಚಿಂತನೆಯನ್ನೇ ಮಾಡಬೇಕು ಹಾಗೂ ಸಾಧ್ಯವಾದಷ್ಟು ಅವರ ಒಳಿತಿಗಾಗಿ ಪ್ರಯತ್ನಿಸಬೇಕು. ನಮ್ಮ ಕೆಲಸಕ್ಕೆ ಜನಮನ್ನಣೆ ದೊರಕಲಿ ಅಥವಾ ತಿರಸ್ಕಾರ ದೊರೆಯಲಿ, ನಾವು ಮಾತ್ರ ಕೆಲಸವನ್ನು ಪೂಜೆ ಎಂಬ ದೃಷ್ಟಿಯಿಂದ ದಕ್ಷತೆಯಿಂದ ಮಾಡಲು ಪ್ರಯತ್ನಿಸಬೇಕು. ಹೀಗೆ ಮಾಡುತ್ತಾ ಬಂದಲ್ಲಿ ಅದು ನಮ್ಮ ವ್ಯಕ್ತಿತ್ವವನ್ನು ಅತ್ಯಂತ ಪ್ರಭಾವಶಾಲಿಯಾಗಿ ರೂಪಿಸುವುದು ಖಂಡಿತ.

ಯಾರ ಕಡೆಗೂ ಗಮನ ಹರಿಸಬಾರದು ಎಂದರೆ ಇತರರನ್ನು ಅಸಡ್ಡೆಯಿಂದ, ನಿರ್ಲಕ್ಷ್ಯದಿಂದ ಕಾಣಬೇಕೆಂದಲ್ಲ. ಅಹಂಕಾರಿಯಾಗಬೇಕೆಂದೂ ಅರ್ಥವಲ್ಲ. ಏಕೆಂದರೆ ಅಹಂಕಾರ, ನಾವು ಇನ್ನೂ ಹೆಚ್ಚು ಇತರರ ಪ್ರತಿಕ್ರಿಯೆಯನ್ನು ಗಮನಿಸುವಂತೆ ಮಾಡುತ್ತದೆ. ತನ್ಮೂಲಕ ನಾವು ನಮ್ಮ ಮೇಲಿನ ಸಂಪೂರ್ಣ ನಿಯಂತ್ರಣವನ್ನೇ ಕಳೆದುಕೊಳ್ಳುತ್ತೇವೆ. ಬದಲಾಗಿ ನಾವು ನಮ್ಮ ಆಲೋಚನೆ, ಭಾವನೆಗಳ ಋಜುತ್ವವನ್ನು, ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳಬೇಕು. ಇವುಗಳ ಕಡೆಗೆ ನಮ್ಮ ಗಮನವಿರಬೇಕೇ ಹೊರತು, ಇತರರ ಪ್ರತಿಕ್ರಿಯೆಯ ಮೇಲಲ್ಲ.

ಯಾವಾಗ ನಾವು ಬೇರೆಯವರ ಕಡೆಗೆ ಆಕರ್ಷಿತರಾಗುವುದಿಲ್ಲವೋ, ಆಗ ಅವರು ನಮ್ಮೆಡೆಗೆ ಆಕರ್ಷಿತರಾಗುತ್ತಾರೆ. ಪ್ರಾಣಿಗಳ ವಿಷಯದಲ್ಲಿಯೂ ಇದು ಹೀಗೆಯೇ ಆಗುತ್ತದೆ. ನಮ್ಮಲ್ಲಿ ಹಿಂಸೆಯ ಭಾವನೆ ಇದ್ದಾಗ ಸರ್ಪದಲ್ಲಿ ಭಯ ಉಂಟಾಗುತ್ತದೆ. ಆಗ ಅದು ತನ್ನ ರಕ್ಷಣೆಗೆ ನಮ್ಮನ್ನು ಕಚ್ಚುವ ಪ್ರವೃತ್ತಿ ತೋರಿಸುತ್ತದೆ. ಆದರೆ ಸಂತರಲ್ಲಿ ಹಿಂಸೆಯ ಭಾವನೆಯೇ ಇರುವುದಿಲ್ಲ. ಉದಾಹರಣೆಗೆ, ರಮಣ ಮಹರ್ಷಿಗಳು. ಸರ್ಪವು ಅವರ ಮೈಮೇಲೆ ಸಂಚರಿಸುತ್ತಿದ್ದರೂ ಅವರಿಗಾಗಲಿ, ಸರ್ಪಕ್ಕಾಗಲಿ ಅದರ ಅರಿವಾಗುತ್ತಿರಲಿಲ್ಲ.

## ಜಗತ್ತಿದೆ ನಮ್ಮ ಮುಷ್ಟಿಯಲ್ಲಿ

ನಾವು ಇತರರ ಹೊಗಳಿಕೆ – ತೆಗಳಿಕೆಗೆ ಹಾತೊರೆಯದೆ ನಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುತ್ತಾ ಬಂದಲ್ಲಿ ಅದು ನಮ್ಮಲ್ಲಿ ಒಂದು ವಿಶಿಷ್ಟವಾದ ಅಂತಸ್ಸತ್ವವಾಗಿ ಪರಿಣಮಿಸುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು ವಾಸವಾಗಿದ್ದುದು ದಕ್ಷಿಣೇಶ್ವರದಲ್ಲಿ. ಇದು ಕಲ್ಕತ್ತದಿಂದ ಅತ್ಯಂತ ಸಮಿಪದಲ್ಲಿದೆ. ಕಲ್ಕತ್ತಾ ಆಗಿನ ಭಾರತದ ರಾಜಧಾನಿ. ೧೮೫೭ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು ಎಂಬುದು ನಮಗೆಲ್ಲ ತಿಳಿದ

ವಿಷಯ. ಭಾರತದಾದ್ಯಂತ ನಡೆದ ಈ ಸಂಗ್ರಾಮದ ಕಾವು ಕಲ್ಕತ್ತಾದಲ್ಲಿ ಕಂಡು ಬಂದಿರಲೇಬೇಕು. ಆದರೆ ದಕ್ಷಿಣೇಶ್ವರದಲ್ಲಿ ನೆಲೆಸಿದ್ದ ಶ್ರೀರಾಮಕೃಷ್ಣರ ಜೀವನದಲ್ಲಿ ಈ ಸಮಯದ ಒಂದೇ ಒಂದು ಮಾತು, ಉಲ್ಲೇಖವನ್ನೂ ನಾವು ಕಾಣಲಾರೆವು. ಆಗ ಅವರು ತೀವ್ರ ಸಾಧನೆಯಲ್ಲಿ ತೊಡಗಿದ್ದರು. ಆ ಸಾಧನೆಯ ತೀವ್ರತೆ ಹೇಗಿತ್ತೆಂದರೆ, ಅವರ ಪಾಲಿಗೆ ಸುತ್ತ ಮುತ್ತಲಿನ ಜಗತ್ತಿನ ಅರಿವೇ ಇರಲಿಲ್ಲ. ಹೀಗಾಗಿ ಅವರೊಂದು ಅದ್ಭುತ ಶಕ್ತಿಯಾಗಿ ಹೊರಹೊಮ್ಮಿದರು. ಇಂದು ಜಗತ್ತು ಅವರನ್ನು ಅವತಾರ ಪುರುಷರೆಂದು ಗೌರವಿಸುತ್ತಿದೆ. ಅವರ ಶಿಷ್ಯಾಗ್ರಣಿಯಾದ ಸ್ವಾಮಿ ವಿವೇಕಾನಂದರ ಚಿಂತನೆಗಳು ಭಾರತದ ಸ್ವಾತಂತ್ರ್ಯದಲ್ಲಿ ಮಹತ್ವಪೂರ್ಣ ಪಾತ್ರವನ್ನು ವಹಿಸಿದವು.

ಒಬ್ಬ ವಿಜ್ಞಾನಿ ಅನೇಕ ದಶಕಗಳ ಕಾಲ ತನ್ನ ಸಂಶೋಧನೆಯಲ್ಲಿ ತೊಡಗಿರುತ್ತಾನೆ. ಆ ಅವಧಿಯಲ್ಲಿ ಜಗತ್ತು ಆತನ ಪಾಲಿಗೆ ಸತ್ತಂತೆಯೇ. ಜಗತ್ತಿನ ಜನರ ಯಾವೊಂದು ಪ್ರತಿಕ್ರಿಯೆಗೂ ಆತ ಬೆಲೆ ಕೊಡುವುದಿಲ್ಲ. ತತ್ಪರಿಣಾಮವಾಗಿ ಆತನ ಏಕಾಗ್ರತೆ ಹಾಗೂ ಮನಸ್ಸಿನ ಶಕ್ತಿ ಕೇವಲ ಸಂಶೋಧನೆಗೇ ಮೀಸಲಾಗಿರುತ್ತದೆ. ಸಂಶೋಧನೆ ಪೂರ್ಣಗೊಂಡು, ಹೊಸದೊಂದು ಆವಿಷ್ಕಾರದೊಂದಿಗೆ ಆತ ಹೊರಬಂದಾಗ ಜಗತ್ತು ಆತನನ್ನು ನೋಡಿ ನಿಬ್ಬೆರಗಾಗುತ್ತದೆ. ಆದ್ದರಿಂದಲೇ ಜಗತ್ತಿನಿಂದ ನಿರೀಕ್ಷೆ ಇರಬಾರದು. ಜಗತ್ತಿನ ಕಡೆಗೆ ಗಮನವೇ ಇಲ್ಲವೆಂದರೆ, ಜಗತ್ತು ನಿಮ್ಮ ಮುಷ್ಟಿಯಲ್ಲಿರುತ್ತದೆ ಎನ್ನಬಹುದು.

## ತಾಳಿದವನು ಬಾಳಿಯಾನು

ಆಂಗ್ಲ ಭಾಷೆಯಲ್ಲಿ shortcut will cut you short ಎಂಬ ಮಾತಿದೆ. ಒಮ್ಮೆ ಓರ್ವ ವಿದ್ಯಾರ್ಥಿ ಗುರುಕುಲಕ್ಕೆ ಹೋದ. ಅಲ್ಲಿ ವಿದ್ಯೆಗಳಿಸಲು ನೀಡಬೇಕಾದ ವಿದ್ಯಾಶುಲ್ಕ ಆತನ ಬಳಿ ಇರಲಿಲ್ಲ. ವಿದ್ಯಾಶುಲ್ಕ ಗಳಿಸಲು ಎರಡು ಮಾರ್ಗಗಳಿದ್ದವು. ಒಂದು, ಅಲ್ಲಿನ ಉದ್ಧಟ ಕುದುರೆಯನ್ನು ಪಳಗಿಸಬೇಕಾಗಿತ್ತು. ಆಗ ಆ ಸಾಹಸ ಕಾರ್ಯದಿಂದ ಆತನಿಗೆ ವಿದ್ಯಾರ್ಥಿವೇತನ ದೊರಕಬಹುದಾಗಿತ್ತು. ಎರಡನೆಯದು, ಅಲ್ಲಿನ ಶ್ರೀಮಂತ ವಿದ್ಯಾರ್ಥಿಗಳ ದಾಸತ್ವ ಸ್ವೀಕರಿಸುವುದು. ಅವರು ವಿದ್ಯಾಶುಲ್ಕವನ್ನು ನೀಡುತ್ತಿದ್ದರು.

ಈ ವಿದ್ಯಾರ್ಥಿ ಮೊದಲನೆಯ ಮಾರ್ಗ ಕಷ್ಟವೆಂದು ತಿಳಿದು, ಎರಡನೆಯ ಉಪಾಯಕ್ಕೆ ಒಪ್ಪಿದ. ಪರಿಣಾಮವಾಗಿ ಓರ್ವ ಶ್ರೀಮಂತ ವಿದ್ಯಾರ್ಥಿಯ ದಾಸನಾದ. ಆದರೆ, ಇನ್ನು ಆತನಿಗೆ ವಿದ್ಯೆಗೆ ಅವಕಾಶವೆಲ್ಲಿ? ಏಕೆಂದರೆ ದಾಸತ್ವ ಸ್ವೀಕರಿಸಿದ ಬಳಿಕ ಆ ಶ್ರೀಮಂತ ವಿದ್ಯಾರ್ಥಿ ಈತನನ್ನು ಯಾವಾಗೆಂದರೆ ಆಗ ಕರೆಯಲಾರಂಭಿಸಿದ. ಪಾಠವನ್ನು ಸರಿಯಾಗಿ ಕೇಳಲೂ ಬಿಡುತ್ತಿರಲಿಲ್ಲ.

ಹತಾಶನಾಗಿ ಕುಳಿತಿದ್ದ ಈ ವಿದ್ಯಾರ್ಥಿಗೆ ಓರ್ವ ಆಚಾರ್ಯರು ಹೇಳಿದರು, ''ನೋಡು, ಜೀವನದಲ್ಲಿ ಪ್ರತಿ ಕೆಲಸಕ್ಕೂ ಎರಡು ಮಾರ್ಗಗಳಿರುತ್ತವೆ. ಒಂದು ಸುಖಕರ ಇನ್ನೊಂದು ಕಠಿಣ. ಸುಖಕರ ಮಾರ್ಗ ನೋಡಲು ಸುಂದರ. ಆದರೆ ಅದರಿಂದ ನೀನು ಗುರಿಯಿಂದಲೇ ದೂರ ಹೋಗುತ್ತೀಯೆ. ಈಗ ನಿನಗಾದದ್ದೂ ಅದೇ. ನೀನು ದಾಸತ್ವದ ಸುಖಕರ ಮಾರ್ಗ ಅನುಸರಿಸಿದೆ. ಈಗ ನಿನಗೆ ವಿದ್ಯಾರ್ಜನೆಗೇ ಸಮಯ ದೊರಕುತ್ತಿಲ್ಲ. ಇನ್ನೊಂದು ಕಠಿಣ ಮಾರ್ಗ. ಅದು ಕಷ್ಟಕರ. ಸಮಯ ತೆಗೆದುಕೊಳ್ಳುತ್ತದೆ. ಆದರೆ ಅದು ನಿನ್ನನ್ನು ಗುರಿಯಿಂದ ವಿಮುಖಗೊಳಿಸುವುದಿಲ್ಲ. ಗುರಿಯ ಬಳಿಗೆ ಕರೆದೊಯ್ಯುತ್ತದೆ. ಹೋಗು, ಆ ಕುದುರೆಯನ್ನು ಪಳಗಿಸು. ವಿದ್ಯಾಶುಲ್ಕ ಸಂಪಾದಿಸಿ, ವಿದ್ಯಾರ್ಜನೆ ಮಾಡು'' ಎಂದು.

ನಾವು ಅನೈತಿಕತೆಗೆ ಯಾಕೆ ಜಾರುತ್ತೇವೆ? ಏಕೆಂದರೆ ನಮ್ಮಲ್ಲಿ ಕೆಲಸವನ್ನು ಪೂರ್ಣಗೊಳಿಸಿ ಅದರ ಫಲ ಬರುವವರೆಗೆ ತಾಳಬೇಕು ಎಂಬ ಶಕ್ತಿಯಿಲ್ಲ. ಹೀಗಾಗಿ ನಾವು ತ್ವರಿತ ಫಲವನ್ನು ಬಯಸುತ್ತೇವೆ. ಜೀವನದ ಗುರಿಯನ್ನು ಮರೆಯುತ್ತೇವೆ. ಆದ್ದರಿಂದ ಸ್ವಾಮೀಜಿ ಹೇಳುತ್ತಿದ್ದಾರೆ, 'ಆದರೆ ಆತ ಅದಕ್ಕಾಗಿ ಪ್ರಯತ್ನ ಪಡಬೇಕು ಹಾಗೂ ಕೆಲಕಾಲ ಕಾಯಬೇಕು' ಎಂದು. ನಮ್ಮ ವಿದ್ಯಾರ್ಥಿಗಳು ಈ ಅಂಶವನ್ನು ಮನಗಾಣುವುದು ಮುಖ್ಯ.

## ಚಿಂತೆಯೆಂಬ ಚಿತೆಯಿಂದ ಪಾರಾಗಿ

ಆದ್ದರಿಂದಲೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದುದು, '**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**' ಎಂದರೆ ಕರ್ಮಕ್ಕೆ ಮಾತ್ರವೇ ನಿನಗೆ ಅಧಿಕಾರ. ಕರ್ಮಫಲದಲ್ಲಿ ಎಂದಿಗೂ ಆಸಕ್ತಿಯಾಗದಿರಲಿ ಎಂದು. ನಮ್ಮ ಪೂರ್ವಿಕರು ಕರ್ತವ್ಯ ಪಥದ ಕಡೆಗೆ ಗಮನವನ್ನು ಹರಿಸಿದರೇ ಹೊರತು ಫಲ ದೊರೆಯುವುದೋ ಇಲ್ಲವೋ ಎಂದಲ್ಲ. ರಾಮಾಯಣ – ಮಹಾಭಾರತದ ರಾಮ, ಲಕ್ಷ್ಮಣ, ಭರತ, ಸೀತೆ, ಪಾಂಡವರು, ಕೃಷ್ಣ, ಕುಂತಿ – ಇವರೆಲ್ಲ ಎಷ್ಟೇ ವಿಪತ್ತು ಎದುರಾದರೂ, ಎಂತಹುದೇ ಕಷ್ಟ-ನಷ್ಟಗಳಿಗೆ ತುತ್ತಾದರೂ, ತಮ್ಮೆದುರಿಗಿನ ಕರ್ತವ್ಯದಿಂದ ವಿಮುಖರಾಗಲಿಲ್ಲ. ಹೀಗಾಗಿ ಸಾವಿರಾರು ವರ್ಷಗಳ ತರುವಾಯವೂ ಇವರುಗಳು ನಮಗೆ ಸ್ಫೂರ್ತಿಯ ಚಿಲುಮೆಗಳಾಗಿದ್ದಾರೆ.

ಒಂದು ಸುಭಾಷಿತ ಹೀಗೆ ಹೇಳುತ್ತದೆ,

**ಗತ ಶೋಕಂ ನ ಕುರ್ವೀತ ಭವಿಷ್ಯಂ ನೈವ ಚಿಂತಯೇತ್ ।**
**ವರ್ತಮಾನೇಷು ಕಾರ್ಯೇಷು ವರ್ತಯಂತಿ ವಿಚಕ್ಷಣಾಃ ॥**

'ಬುದ್ಧಿವಂತರು ಗತಕಾಲದ ಘಟನೆಗಳನ್ನು ಕುರಿತು ಶೋಕಿಸುವುದಿಲ್ಲ. ಭವಿಷ್ಯದ ಬಗೆಗೆ ಚಿಂತಿಸುವುದಿಲ್ಲ. ಅವರು ವರ್ತಮಾನ ಕಾಲದಲ್ಲೇ ಕಾರ್ಯನಿರ್ವಹಿಸುತ್ತಾರೆ.'

ಹೀಗೆಂದಾಕ್ಷಣ ನಾವು ಭವಿಷ್ಯದ ಕುರಿತಾಗಿ ಪೂರ್ವಯೋಜನೆ ಮಾಡಬಾರದು ಎಂದೇನಿಲ್ಲ. ಮೇಲೆ ಹೇಳಿದ ವ್ಯಕ್ತಿಗಳ ಜೀವನವನ್ನು ಅವಲೋಕಿಸಿದಾಗ, ಅವರೆಲ್ಲ ದೂರದೃಷ್ಟಿ

ಇದ್ದವರೇ ಎಂಬುದು ನಮಗೆ ತಿಳಿಯುತ್ತದೆ. ಆದರೆ ಭವಿಷ್ಯ ಇರುವುದು ವರ್ತಮಾನದಲ್ಲಿ ಎಂಬುದನ್ನು ಅವರೆಂದೂ ಮರೆಯಲಿಲ್ಲ. ಈ ಒಂದು ಅಂಶವನ್ನು ನಾವು ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಸಾಧ್ಯವಾದರೆ, ನಾವು ಚಿಂತೆಯೆಂಬ ಚಿತೆಯಿಂದ ಪಾರಾಗುವುದು ಖಂಡಿತ.

### ಉಪಸಂಹಾರ

ಪ್ರತಿಯೊಂದು ಕೆಲಸವನ್ನು ನಿಷ್ಠೆಯಿಂದ, ಏಕಾಗ್ರತೆಯಿಂದ ಮಾಡಲು ಸಾಧ್ಯವಾದರೆ, ಅದು ನಮ್ಮಲ್ಲಿ ಅದ್ಭುತವಾದ ಇಚ್ಛಾಶಕ್ತಿ ಹಾಗೂ ಏಕಾಗ್ರತೆಯನ್ನು ತಂದುಕೊಡುತ್ತದೆ. ಸ್ವಾಮಿ ವಿವೇಕಾನಂದರು ಬೆಳಗಾವಿಯಲ್ಲಿದ್ದಾಗ ನಡೆದ ಘಟನೆ ಇದು: ಯಾವುದೋ ಸಂದರ್ಭದಲ್ಲಿ ಸ್ವಾಮೀಜಿ ‘ಪಿಕ್‌ವಿಕ್ ಪೇಪರ್ಸ್’ ಎಂಬ ಗ್ರಂಥದ ಕೆಲವು ಪುಟಗಳನ್ನು ಹಾಗೆ ಹಾಗೆಯೇ ಉದ್ಧರಿಸಿದರು. ಇದನ್ನು ಕಂಡ ಆತಿಥೇಯನು ಸ್ವಾಮೀಜಿಗೆ ಪ್ರಶ್ನಿಸಿದ, ‘‘ಸ್ವಾಮೀಜಿ, ಎಷ್ಟು ಸಲ ಓದಿದ್ದೀರಿ ಅದನ್ನು?’’ ಎಂದು. ‘‘ಒಟ್ಟು ಎರಡು ಸಲ; ಒಮ್ಮೆ ನಾನು ಶಾಲೆಯಲ್ಲಿ ಓದುತ್ತಿದ್ದಾಗ, ಇನ್ನೊಮ್ಮೆ ಈಗ ಆರು ತಿಂಗಳ ಕೆಳಗೆ’’ ಎಂದರು ಸ್ವಾಮೀಜಿ. ಅದನ್ನು ಕೇಳಿ ಆತಿಥೇಯನ ಆಶ್ಚರ್ಯ ಇನ್ನೂ ಹೆಚ್ಚಾಯಿತು. ‘‘ಹಾಗಾದರೆ, ಅದೆಲ್ಲ ನಿಮಗೆ ಮಾತ್ರ ನೆನಪಿರುತ್ತದೆ, ನಮಗೇಕೆ ನೆನಪಿರುವುದಿಲ್ಲ?’’

ಆಗ ಸ್ವಾಮೀಜಿ ವಿವರಿಸುತ್ತಾರೆ, ‘‘ದೈಹಿಕ ಶಕ್ತಿಗಳ ಮೇಲೆ ಹಿಡಿತ ತಂದುಕೊಳ್ಳುವುದರಿಂದ ಮನಸ್ಸಿನ ಶಕ್ತಿ ಸಿದ್ಧಿಸುತ್ತದೆ. ದೈಹಿಕ ಶಕ್ತಿಗಳನ್ನು ವ್ಯರ್ಥವಾಗಿಸದೆ, ಮಾನಸಿಕ ಶಕ್ತಿಯಾಗಿ ಪರಿವರ್ತಿಸಬೇಕು. ಗೊತ್ತುಗುರಿಯಿಲ್ಲದೆ ನಿರ್ಲಕ್ಷ್ಯದಿಂದ ದೈಹಿಕ ಶಕ್ತಿಯನ್ನು ಭೋಗಲಾಲಸೆಗಾಗಿ ಬಳಸುವುದು ಅತ್ಯಂತ ಅಪಾಯಕಾರಿ. ಇದರಿಂದ ಮನಸ್ಸಿನ ಧಾರಣಾಶಕ್ತಿಯೇ ನಾಶವಾಗಿ ಹೋಗುತ್ತದೆ.’’

ಮುಂದುವರಿಸುತ್ತ ಸ್ವಾಮೀಜಿ ಹೇಳುವ ಮಾತು, ಈ ಲೇಖನದ ಮುಖ್ಯ ವಿಷಯವೇ ಆಗಿದೆ. ಅವರೆನ್ನುತ್ತಾರೆ, ‘‘ಅಲ್ಲದೆ, ನಾವು ಯಾವ ಕೆಲಸವನ್ನೇ ಮಾಡುವಾಗಲೂ ಅದಕ್ಕೆ ನಮ್ಮ ಹೃನ್ಮನಗಳನ್ನು ಸಂಪೂರ್ಣವಾಗಿ ಅರ್ಪಿಸಬೇಕು. ನಾನು ಹಿಂದೆ ಪವಾಹಾರಿ ಬಾಬಾ ಎಂಬ ಮಹಾ ಸಂತರನ್ನು ಭೇಟಿಯಾಗಿದ್ದೆ. ಅವರು ಜಪಧ್ಯಾನಗಳನ್ನು ಎಷ್ಟು ನಿಷ್ಠೆಯಿಂದ ಮಾಡುತ್ತಿದ್ದರೋ ಅಷ್ಟೇ ನಿಷ್ಠೆಯಿಂದ ತಮ್ಮ ಹಿತ್ತಾಳೆಯ ಪಾತ್ರೆಗಳನ್ನೂ ತೊಳೆದು, ಅದನ್ನು ಚಿನ್ನದಂತೆ ಹೊಳೆಯುವ ಹಾಗೆ ಮಾಡುತ್ತಿದ್ದರು’’ ಎಂದು. ❁

## ಶ್ರೀಮಾತೆಯವರ ಉಪದೇಶಗಳು



* ನೋಡು, ಸೇವಾಪರಾಧ ಎನ್ನುವುದೊಂದು ಇದ್ದೇ ಇದೆ. ಅದು ಯಾವ ರೀತಿ ಎಂದರೆ, ಸೇವೆ ಮಾಡುತ್ತ ಮಾಡುತ್ತ ಅಧಿಕಾರ ಸಿಕ್ಕಿದಾಗ ಅವನ ಅಹಂಕಾರ ಹೆಚ್ಚಾಗುತ್ತದೆ. ಆಗ ಅವನು ಗೊಂಬೆಯ ಹಾಗೆ ಆಟವಾಡಿಸ ಬಯಸುತ್ತಾನೆ. ಎಬ್ಬಿಸುವುದು, ಕುಳ್ಳಿರಿಸುವುದು, ತಿನ್ನಿಸುವುದು ಎಲ್ಲವನ್ನೂ ಅವನೇ ಮಾಡಬೇಕು. ಆಮೇಲೆ ಅವನಲ್ಲಿ ಸೇವಾಭಾವ ಉಳಿಯಲಾರದು. ಯಾರು ತನ್ನ ದೈಹಿಕ ಸುಖ, ದುಃಖಗಳನ್ನೆಲ್ಲ ಮರೆತು ಅವರ ಸುಖದುಃಖವೇ ತನ್ನ ಸುಖದುಃಖ ಎಂಬ ಭಾವನೆಯಿಂದ ಸೇವೆ ಮಾಡುತ್ತಾರೋ ಅವರಿಗೆ ಹೀಗೇಕೆ ಆಗಬೇಕು? ಇನ್ನು ಪತನದ ವಿಷಯ ಹೇಳುತ್ತೀಯಾ? ಅನೇಕ ಮಂದಿ ಮಹಾಪುರುಷರ ಸುತ್ತ ಆಧ್ಯಾತ್ಮಿಕತೆಯ ಪ್ರಭಾವಳಿ ಇರುತ್ತದೆ. ಅನೇಕರು ಅದನ್ನು ನೋಡಿ ಆಕರ್ಷಿತರಾಗಿ ಅವರ ಸೇವೆ ಮಾಡಲು ಬರುತ್ತಾರೆ. ಅವರು ಆ ಪ್ರಭಾವಳಿಯಿಂದ ಉನ್ಮತ್ತರಾಗಿ ಅದರಲ್ಲೇ ಮುಳುಗಿಹೋಗುತ್ತಾರೆ. ಎಷ್ಟು ಜನ ಸಾಧುಜನರ ಸೇವೆಯನ್ನು ಸರಿಯಾಗಿ ಮಾಡಬಲ್ಲರು ಹೇಳು?

* ಕೆಲಸ ಮಾಡಬೇಕು. ಅದರಿಂದ ಮನಸ್ಸು ಸುಸ್ಥಿತಿಯಲ್ಲಿರುವುದು. ಆದರೂ ವಿಶೇಷವಾಗಿ ಜಪ-ಧ್ಯಾನ, ಪ್ರಾರ್ಥನೆ ಇತ್ಯಾದಿಗಳನ್ನು ಮಾಡಬೇಕು. ಕಡೇಪಕ್ಷ ಮುಂಜಾನೆ ಮತ್ತು ಸಾಯಂಕಾಲ ಒಂದೊಂದು ಸಲವಾದರೂ ಜಪ, ಧ್ಯಾನಕ್ಕೆ ಕುಳಿತುಕೊಳ್ಳಲೇಬೇಕು. ಅದು ನೌಕೆಯ ಹುಟ್ಟು ಹೇಗೋ ಹಾಗೆ. ಸಾಯಂಕಾಲ ಧ್ಯಾನಕ್ಕೆ ಕುಳಿತರೆ ಇಡೀ ದಿನ ಏನೇನು ಒಳ್ಳೆಯ, ಕೆಟ್ಟ ಕೆಲಸ ಮಾಡಿದೆ, ಏನೇನು ಮಾಡಿಲ್ಲ ಈ ಎಲ್ಲ ಆಲೋಚನೆಗಳು ಮನಸ್ಸಿಗೆ ಬರುವವು. ಅಂತೆಯೇ ಹಿಂದಿನ ಮನಸ್ಸಿನ ಅವಸ್ಥೆಯೊಂದಿಗೆ ಈಗಿನ ಮನಸ್ಸಿನ ಅವಸ್ಥೆಯನ್ನು ಹೋಲಿಸಿ ನೋಡಬೇಕು. ಅನಂತರ ಜಪ ಮಾಡುತ್ತ ಇಷ್ಟಮೂರ್ತಿಯನ್ನು ಧ್ಯಾನಿಸಬೇಕು. ಮೊದಮೊದಲು ಧ್ಯಾನದಲ್ಲಿ ಮುಖವೇ ಕಾಣಿಸುವುದು. ಆದರೆ ಪಾದಗಳಿಂದ ಆರಂಭಿಸಿ ಇಡೀ ದೇಹವನ್ನು ಸಮಗ್ರವಾಗಿ ಧ್ಯಾನಿಸಬೇಕು. ಕೆಲಸದೊಂದಿಗೆ ಬೆಳಿಗ್ಗೆ, ಸಾಯಂಕಾಲ ಜಪ, ಧ್ಯಾನ ಮಾಡದಿದ್ದರೆ ನೀನು ಏನು ಮಾಡುತ್ತಿದ್ದೀಯೆ, ಏನು ಮಾಡುತ್ತಿಲ್ಲ ಎಂದು ತಿಳಿಯುವುದಾದರೂ ಹೇಗೆ ?

*(‘ಶ್ರೀ ಶಾರದಾದೇವಿ ವಚನವೇದ’, ಪು. ೫೪೪-೫೦)*